# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಆಸಾನಿ/84ಎ/ಆಡಳಿತ-4/2013-14
2146-219

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 17.04.2015.

## :: ಜ್ಞಾಪನ ::

ವಿಷಯ: ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಯನ್ನು ಅನುಷ್ಠಾನದಂತೆ ಮೀಸಲಾತಿಯನ್ನು ಕಲ್ಪಿಸಿರುವುದರಿಂದ ದಿನಾಂಕ: 01.01.2015 ರಲ್ಲಿದ್ದಂತೆ ಅಧೀಕ್ಷಕರ **ರಾಜ್ಯ ಮಟ್ಟದ ಸ್ಥಳೀಯ ವೃಂದ (ಶೇ. 8 ರಷ್ಟು ಮೀಸಲಾತಿ), ಪ್ರಾಂತೀಯ ಸ್ಥಳೀಯ ವೃಂದ (ಶೇ. 80 ರಷ್ಟು ಮೀಸಲಾತಿ) ಮತ್ತು ಅವಶಿಷ್ಟ ವೃಂದದ** ತಾತ್ಕಾಲಿಕ ಜೇಷ್ಠತಾ ಪಟ್ಟಿ..

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್/06/ ಪಿಎಲ್‌ಎಕ್ಸ್/2012, ದಿನಾಂಕ 06.11.2013.
2. ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಲಾದ ಸರ್ಕಾರದ ಅಧಿಸೂಚನೆ-I ಮತ್ತು II ಸಂಖ್ಯೆ: ಡಿಪಿಎಆರ್/43/ ಹೆಚ್‌ಕೆಸಿ/ 2013, ಬೆಂಗಳೂರು, ದಿನಾಂಕ 25.01.2014 ಮತ್ತು 29.01.2014
3. ಈ ನಿರ್ದೇಶನಾಲಯದ ಅಧಿಸೂಚನೆ ಸಂಖ್ಯೆ: ಆಸಾನಿ.22/ಆಡಳಿತ-4/27883-942/2013-14, ದಿನಾಂಕ 03.02.2014.
4. ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಅಧಿಕೃತ ಜ್ಞಾಪನ ದಿನಾಂಕ: 04.06.2014.
5. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ, ಇವರ ಪತ್ರ ಸಂಖ್ಯೆ: ಜಿಸಂಸಂ/ದಾವ/ಆಡಳಿತ/ಜೇ.ಪ/504/14-15, ದಿನಾಂಕ: 07.07.2014.

***********

ಭಾರತ ಸಂವಿಧಾನದ ಅನುಚ್ಛೇದ 371(ಜೆ)ರನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶದವರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದು ಅದರಂತೆ ಅನುಷ್ಠಾನಗೊಳಿಸಲು ಉಲ್ಲೇಖ (1) ಮತ್ತು (2)ರ ಅಧಿಸೂಚನೆಯಲ್ಲಿ ಆದೇಶಿಸಿದ ಹಿನ್ನೆಲೆಯಲ್ಲಿ, ಉಲ್ಲೇಖ (3)ರನ್ವಯ ಈ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಅಧಿಸೂಚನೆಯನ್ವಯ ಬೀದರ್, ಬಳ್ಳಾರಿ, ಗುಲಬರ್ಗಾ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗೆ ಒಳಪಡುವ ರಾಜ್ಯ ಸ್ಥಳೀಯ ವೃಂದಕ್ಕೆ **ಶೇ. 8 ರಷ್ಟು ಮೀಸಲಾತಿ ನಿಗದಿಪಡಿಸಿ ಅದರಂತೆ** 30 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ/ನಿಯೋಜನಾ ಇಲಾಖೆ ಮತ್ತು ಕೇಂದ್ರ ಕಛೇರಿ/ಬೆಂಗಳೂರು ನಿಯೋಜನಾ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರಿಂದ ಸ್ವೀಕೃತವಾದ ಇಚ್ಛಾಪತ್ರ ಹಾಗೂ ದಾಖಲಾತಿಗಳನ್ನಾಧರಿಸಿ ಉಲ್ಲೇಖ (4)ರಲ್ಲಿ ದಿನಾಂಕ : 31.05.2014 ರಲ್ಲಿದ್ದಂತೆ ರಾಜ್ಯ ಮಟ್ಟದ ಸ್ಥಳೀಯ ವೃಂದ (ಶೇ. 8 ರಷ್ಟು ಮೀಸಲಾತಿ), ಪ್ರಾಂತೀಯ ಸ್ಥಳೀಯ ವೃಂದ (ಶೇ. 80 ರಷ್ಟು ಮೀಸಲಾತಿ) ಮತ್ತು ಅವಶಿಷ್ಟ ವೃಂದದಲ್ಲಿ **ಮೀಸಲಾತಿಯನ್ನು** ಕೋರಿರುವ ಬೆರಳಚ್ಚುಗಾರರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿತ್ತು.

ಪ್ರಸ್ತುತ ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ಪಡೆದಿರುವ ನೌಕರರ ಹೆಸರುಗಳನ್ನು ಸೇರ್ಪಡಿಸಿ ಜೇಷ್ಠತೆಗೆ ಪರಿಗಣಿಸಲಾಗಿದೆ.

ಮುಂದುವರೆದಿದೆ. . .

ಉಲ್ಲೇಖ (5)ರಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ದಾವಣಗೆರೆ, ಇಲ್ಲಿ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎಸ್.ಡಿ. ಮುರುಗೇಸ್ವಾಮಿ ಇವರ ಹೆಸರು ಹಿಂದಿನ ತಾತ್ಕಾಲಿಕ ಜೇಷ್ಟತಾ ಪಟ್ಟಿಯಲ್ಲಿ ತಪ್ಪಾಗಿ ನಮೂದಿಸಿರುವ ಹಿನ್ನಲೆಯಲ್ಲಿ ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಿ ಸರಿಪಡಿಸಲಾಗಿದೆ.

ಒಟ್ಟಾರೆ ದಿನಾಂಕ : 31.12.2014ರವರೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ಪಡೆದಿರುವ ನೌಕರರನ್ನು ಜೇಷ್ಠತೆಗೆ ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕಾಗಿರುವುದರಿಂದ **ದಿನಾಂಕ : 01.01.2015ರಲ್ಲಿದ್ದಂತೆ** ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಜ್ಞಾಪನದೊಂದಿಗೆ ಲಗತ್ತಿಸಲಾದ ಅನುಬಂಧ 1 ರಿಂದ 3ವರೆಗೆ ಹೊರಡಿಸಲಾಗಿದೆ. ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವ **ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಮತ್ತು ಜೇಷ್ಠತಾ ಕ್ರಮ ಸಂಖ್ಯೆ** ಬಗ್ಗೆ **"ಆಕ್ಷೇಪಣೆಗಳೇನಾದರೂ "** ಇದ್ದಲ್ಲಿ ಸಾಕ್ಷ್ಯಾಧಾರಗಳೊಂದಿಗೆ ಲಿಖಿತ ರೂಪದಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸಂಬಂಧಿಸಿದ ಮೇಲಾಧಿಕಾರಿಗಳ ಮೂಲಕ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದೆಂದು ತಿಳಿಸಿದೆ. 30 ದಿನಗಳ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಜೇಷ್ಠತಾ ಪಟ್ಟಿಯು ಸರ್ಕಾರ/ನ್ಯಾಯಾಲಯದಿಂದ ಹೊರಡಿಸುವ ತಿದ್ದುಪಡಿ ಆದೇಶ/ಆಜ್ಞೆಗೆ ಒಳಪಟ್ಟಿರುತ್ತದೆ.

(ಕೆ. ಲಕ್ಷ್ಮೀಪತಿ)
ನಿರ್ದೇಶಕರು

ಗೆ,
ಸಂಬಂಧಪಟ್ಟ ಎಲ್ಲಾ ನೌಕರರಿಗೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ – ನಿಮ್ಮ ಅಧೀನದಲ್ಲಿ ಬರುವ ಎಲ್ಲಾ ಅಧೀಕ್ಷಕರಿಗೆ (ಜಿಲ್ಲಾ ಕಚೇರಿ ಮತ್ತು ನಿಯೋಜನೆ) ಈ ಜೇಷ್ಠತಾ ಪಟ್ಟಿಯ ಪ್ರತಿಯನ್ನು ಒದಗಿಸಿ ಸ್ವೀಕೃತಿ ಪಡೆದು ಸಲ್ಲಿಸಲು ಸೂಚಿಸಲಾಗಿದೆ.
3. ಜಂಟಿ ನಿರ್ದೇಶಕರು(ಆಡಳಿತ), ಆಸಾಂನಿ, ಕೇಂದ್ರ ಕಚೇರಿ, ಬೆಂಗಳೂರು.
4. ನಿರ್ದೇಶಕರ ಆಪ್ತ ಸಹಾಯಕರಿಗೆ.
5. ಪತ್ರಾಂಕಿತ ವ್ಯವಸ್ಥಾಪಕರಿಗೆ.
6. ಕಚೇರಿ ಪ್ರತಿ.
7. ನೀತಿ ಜೇಷ್ಠತಾ ಪಟ್ಟಿಯನ್ನು ಈ ನಿರ್ದೇಶನಾಲಯದ ಅಂತರ್ಜಾಲ des-dir@kar.nic.in ರಲ್ಲಿ ಪ್ರಕಟಿಸಲಾಗಿದೆ.

ಅನುಬಂಧ-1

ರಾಜ್ಯ ಸ್ಥಳೀಯ ವೃಂದ (ಶೇ. 8 ರಷ್ಟು) ಮೀಸಲಾತಿ (**Seniority list of State Regional Cader**)

ದಿನಾಂಕ: 01.01.2015 ರಲ್ಲಿದ್ದಂತೆ ಅಧೀಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ

| ಕ್ರಮ ಸಂಖ್ಯೆ | ಸಾಮಾನ್ಯ ಜೇಷ್ಠತಾ ಸಂಖ್ಯೆ | ಹೆಸರು ಶ್ರೀ/ಶ್ರೀಮತಿ | ನೇರ ನೇಮಕಾತಿ/ ಮುಂಬಡ್ತಿ/ ಇತರೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸ್ಥೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ನೇಮಕಾತಿಗೆ/ ಜೇಷ್ಠತೆಗೆ ಸ್ಥೈಜವಾದ ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|
| <1> | <2> | <3> | <4> | <5> | <6> | <7> | <8> | <9> |

ಯಾರು ಇರುವುದಿಲ್ಲ

ನಿರ್ದೇಶಕರು